

بسم اللهِ الرَّحمٰنِ الرَّحيم

# ಬೈಅತ್ ನಿಬಂಧನೆಗಳು – ಹೊಸ ವರ್ಷದಲ್ಲಿ ನಾವು ನೆನಪಿಸಬೇಕಾದ ಪ್ರಾಮುಖ್ಯ ಕರ್ತವ್ಯಗಳು.

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **02-01-2015** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ)* ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ *ಹೀಗೆ ಹೇಳಿದರು:*

ಇಂದಿನ ಜುಮುಅ 2015ನೆ ಹೊಸ ವರ್ಷದ ಪ್ರಥಮ ಜುಮುಅ ಆಗಿದೆ. ಅನೇಕ ಜನರಿಂದ ನನಗೆ ಹೊಸ ವರ್ಷದ ಶುಭಾಶಯಗಳು ಬರುತ್ತಾ ಇವೆ. ನಿಮಗೆಲ್ಲರಿಗೂ ಈ ಹೊಸ ವರ್ಷ ಎಲ್ಲ ರೀತಿಯಲ್ಲೂ ಶುಭದಾಯಕವಾಗಲಿ ಎಂದು ಹಾರೈಸುವುದರೊಂದಿಗೆ ನಾನು ಹೇಳಬಯಸುವುದೇನೆಂದರೆ, ಒಬ್ಬರಿನ್ನೊಬ್ಬರಿಗೆ ಶುಭಾಶಯಗಳನ್ನು ಕೋರುವುದರ ಲಾಭ ನಮಗೆ ಸಿಗಬೇಕಾದರೆ ನಾವು ನಮ್ಮನ್ನು ಪರಿಶೀಲಿಸಿ ಕಳೆದ ವರ್ಷ ನಾವು ಅಹ್ಮದಿಯಾಗಿ ಮಾಡಬೇಕಾದ ಕರ್ತವ್ಯಗಳನ್ನು ಎಷ್ಟರ ಮಟ್ಟಿಗೆ ಈಡೇರಿಸಿದ್ದೇವೆ, ಮುಂದೆ ನಾವು ಈ ಕರ್ತವ್ಯಗಳನ್ನು ಈಡೇರಿಸಲು ಎಷ್ಟು ಪ್ರಯತ್ನ ಮಾಡುವೆವು ಎನ್ನುವುದನ್ನು ಪರಿಶೀಲಿಸಬೇಕು. ಇಂದಿನ ಜುಮುಅ ದಿನದಿಂದ ನಾವು ಎಂತಹ ದೃಢನಿರ್ಧಾರ ಮಾಡಬೇಕೆಂದರೆ ಹೊಸ ವರ್ಷದಲ್ಲಿ ನಮ್ಮ ಕರ್ತವ್ಯಗಳನ್ನು ಈಡೇರಿಸಲು ಉತ್ಸಾಹ ಮತ್ತು ಪರಿಶ್ರಮಪಡಲು ಸಾಧ್ಯವಾಗಬೇಕು. ಅಹ್ಮದಿಯಾಗಿರುವ ನಮ್ಮ ಮೇಲೆ ಹೊರಿಸಲಾದ ಹೊಣೆಗಾರಿಕೆ ಸತ್ಕರ್ಮಗಳನ್ನು ಮಾಡುವ ಮೂಲಕವೇ ಈಡೇರುತ್ತದೆ. ಆ ಸತ್ಕರ್ಮಗಳ ಗುಣಮಟ್ಟ ಹೇಗಿರಬೇಕೆಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸ್ವತಃ ನಮಗೆ ವಿವರಿಸಿ ಕೊಟ್ಟಿರುವರು. ಇಂದಿನ ಕಾಲದಲ್ಲಿ ಹೊಸ ಟೆಕ್ನೋಲಜಿ ಮುಖಾಂತರ ಪ್ರತಿಯೊಬ್ಬ ಅಹ್ಮದಿ ಕನಿಷ್ಠ ವರ್ಷದಲ್ಲಿ ಒಂದು ಸಲ ಆಯಾಕಾಲದ ಖಲೀಫರ ಕೈಗಳಲ್ಲಿ ಬೈಅತ್ ಮಾಡುತ್ತಾ, ತಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿವರಿಸಿದ ಮಟ್ಟವನ್ನು ಗಳಿಸಲು ಪ್ರಯತ್ನಿಸುವೆನೆಂದು ಪ್ರತಿಜ್ಞೆ ಮಾಡುತ್ತಾನೆ. ಬೈಅತ್ ಶರತ್ತುಗಳು ಹತ್ತು ಎಂದು ಪ್ರಸ್ತಾಪಿಸಲಾಗಿದ್ದರೂ ಅವುಗಳ ಮೂಲಕ ಪ್ರತಿಯೊಬ್ಬ ಅಹ್ಮದಿಯ ಮೇಲೆ ಹೊರಿಸಲಾದ ಜವಾಬ್ದಾರಿಗಳು ಮೂವತ್ತಕ್ಕಿಂತಲೂ ಹೆಚ್ಚಾಗಿವೆ ಎಂದು ತಿಳಿಯಬಹುದಾಗಿದೆ.

ನಾವು ನಮ್ಮ ವರ್ಷಾರಂಭಗಳ ಸಂತೋಷವನ್ನು ವಾಸ್ತವಿಕ ರೂಪದಲ್ಲಿ ಆಚರಿಸಬೇಕಾದರೆ ಮೇಲೆ ಪ್ರಸ್ತಾಪಿಸಿದವುಗಳನ್ನು ನಮ್ಮ ಮುಂದಿರಿಸಬೇಕು. ಒಬ್ಬ ಅಹ್ಮದಿ ಎಂದು ಹೇಳಿಕೊಳ್ಳುವವನು, **"ನಾನು ಈಸಾ ಮಸೀಹರ ಮರಣವನ್ನು ನಂಬುತ್ತೇನೆ. ವಾಗ್ದತ್ತ ಮಸೀಹರು ಆಗಮಿಸಿರುವರು ಎಂದು ಸಹ ನಂಬುತ್ತೇನ್"** ಎಂದು ಹೇಳಿ ಸಂತೋಷಪಡುವುದು ಸಾಕಾಗಲಾರದು. ನಿಶ್ಶಂಶಯವಾಗಿಯೂ ಇದು ಪ್ರಥಮ ಹೆಜ್ಜೆಯಾಗಿದೆ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮಿಂದ ನಿರೀಕ್ಷಿಸುವುದು ಏನೆಂದರೆ ನಾವು ಒಳಿತುಗಳ ಬಗ್ಗೆ ಗಾಢವಾಗಿ ಚಿಂತಿಸಿ ಅವುಗಳನ್ನು ಮನವರಿಕೆ ಮಾಡಿಕೊಂಡು ಅವುಗಳನ್ನು ಅನುಷ್ಠಿಸಬೇಕೆಂದಾಗಿದೆ. ಅದೇ ರೀತಿ ನಾವು ಕೆಡುಕುಗಳಿಂದ ನಮ್ಮನ್ನು ಹೇಗೆ ರಕ್ಷಿಸಬೇಕೆಂದರೆ ಒಂದು ರಕ್ತಪಿಪಾಸು ಕ್ರೂರ ಮೃಗದಿಂದ ಮನುಷ್ಯನು ತನ್ನನ್ನು ರಕ್ಷಿಸಿಕೊಳ್ಳುವ ಹಾಗೆ ನಾವು ಕೆಡುಕುಗಳಿಂದ ನಮ್ಮನ್ನು ಸ್ವಯಂ ರಕ್ಷಿಸಿ ಕೊಳ್ಳಬೇಕಾಗಿದೆ. ಹಾಗೆ ಮಾಡಿದರೆ ನಾವು ನಮ್ಮ ಸ್ಥಿತಿಯಲ್ಲಿ ಕ್ರಾಂತಿ ಉಂಟು ಮಾಡುವವರಾಗುವೆ ಅಲ್ಲದೆ ಲೋಕವನ್ನು ಬದಲಾಯಿಸಿ ಅಲ್ಲಾಹನ ಸಮೀಪಕ್ಕೆ ತರುವ ಮಾರ್ಗವಾಗುವೆವು. ಇಂದು ನಾನು ನಿಮಗೆ ಈ ವಿಷಯಗಳ ಬಗ್ಗೆ ಸ್ವಲ್ಪ ಹೆಚ್ಚಿನ ವಿವರಣೆಗಳನ್ನು ನೀಡಬಯಸುವೆನು. ಹೀಗೆ ನೆನಪಿಸಿ ಕೊಡುವುದು ಅತ್ಯಂತ ಆವಶ್ಯಕವಾಗಿದೆ. ನಮ್ಮ ಬೈಅತ್ ಉದ್ದೇಶಗಳು ಯಾವಾಗಲೂ ನಮ್ಮ ಮುಂದೆ ಬರುತ್ತಾ ಇರಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ಹೇಳಿದ ಪ್ರಥಮ ವಿಷಯ ಶಿರ್ಕ್‌ನಿಂದ ನಾವು ನಮ್ಮನ್ನು ರಕ್ಷಿಸಿಕೊಳ್ಳುತ್ತೇವೆ ಎಂದು ಪ್ರತಿಜ್ಞೆ ಮಾಡುವುದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ಉಪದೇಶಿಸಿರುವುದು ಸ್ಥೂಲವಾದ ಬಾಹ್ಯ ಶಿರ್ಕ್ ಬಗ್ಗೆ ಅಲ್ಲ. ಅದು ಸೂಕ್ಷ್ಮವಾದ ರಹಸ್ಯ ಶಿರ್ಕ್ ಬಗ್ಗೆಯಾಗಿದೆ. ಆ ಸೂಕ್ಷ್ಮ ಬಹುದೇವಾರಾಧನೆಯು ಓರ್ವ ಸತ್ಯ ವಿಶ್ವಾಸಿಯ ವಿಶ್ವಾಸವನ್ನು ಬಲಹೀನಗೊಳಿಸುತ್ತದೆ. ಇದರ ಬಗ್ಗೆ ವಿವರಣೆ ನೀಡುತ್ತಾ ಅವರು ಹೇಳಿದರು: "ತೌಹೀದ್ ಎಂದರೆ ಬಾಯಿಯಲ್ಲಿ **ಲಾ ಇಲಾಹ ಇಲ್ಲಲ್ಲಾಹ್** ಎಂದು ಹೇಳಿ ಹೃದಯದಲ್ಲಿ ಸಾವಿರಾರು ವಿಗ್ರಹಗಳನ್ನು ಜಮಾಯಿಸುವುದರ ಹೆಸರಲ್ಲ. ಒಬ್ಬನು ತನ್ನ ಕೆಲಸ, ತನ್ನ ಉಪಾಯ, ತನ್ನ ವಂಚನೆ ಮತ್ತು ಪ್ರಯತ್ನಗಳಿಗೆ ದೇವನಿಗೆ ನೀಡಬೇಕಾದಂತಹ ಮಹತ್ವವನ್ನು ನೀಡುತ್ತಾನಾದರೆ ಅಥವಾ ಯಾವುದಾದರೂ ಮನುಷ್ಯನ ಬಗ್ಗೆ ಭರವಸೆಯನ್ನು ದೇವನ ಬಗ್ಗೆ ಇಡಬೇಕಾದ ಭರವಸೆಯ ಹಾಗೆ ಇರಿಸುತ್ತಾನಾದರೆ ಅಥವಾ ಸ್ವತಃ ತನಗೆ ದೇವನಿಗೆ ನೀಡಬೇಕಾದಂತಹ ಮಹತ್ವ ನೀಡುತ್ತಾನಾದರೆ ಅವನು ದೇವನ ದೃಷ್ಟಿಯಲ್ಲಿ ವಿಗ್ರಹಾರಾಧಕನಾಗುತ್ತಾನೆ. ವಿಗ್ರಹ ಎಂದರೆ ಬರೇ ಚಿನ್ನ, ಬೆಳ್ಳಿ, ಹಿತ್ತಾಳೆ, ಅಥವಾ ಕಲ್ಲಿನಿಂದ ನಿರ್ಮಿಸಲ್ಪಡುವ ಮೂರ್ತಿಗಳಲ್ಲ. ಮತ್ತು ಅವುಗಳ ಬಗ್ಗೆ ಭರವಸೆ ಹೊಂದುವುದು ಮಾತ್ರವಲ್ಲ. ಯಾವುದಾದರೂ ವಸ್ತು, ಮಾತು ಮತ್ತು ಕೆಲಸಕ್ಕೆ ದೇವನಿಗೆ ನೀಡುವಂತಹ

ಮಹತ್ವವನ್ನು ನಾವು ನೀಡುವುವುದಾದರೆ ಅದು ಅಲ್ಲಾಹನ ದೃಷ್ಟಿಯಲ್ಲಿ ವಿಗ್ರಹಾರಾಧನೆಯಾಗಿದೆ.''

ಆದುದರಿಂದ ಇಂದು ನಾವು ಈ ಕಳೆದ ವರ್ಷದ ಬಗ್ಗೆ ಪರಿಶೀಲನೆ ಮಾಡಬೇಕಾಗಿದೆ. ನಾವು ನಮ್ಮ ಪ್ರಯತ್ನ ಮತ್ತು ಉಪಾಯಗಳ ಬಗ್ಗೆಯೇ ಪೂರ್ಣ ಭರವಸೆ ಹೊಂದಿದ್ದೇವೋ ಅಥವಾ ನಾವು ನಮ್ಮ ಪ್ರಯತ್ನಗಳು ಸಫಲವಾಗಲು ಅಲ್ಲಾಹನ ಮುಂದೆ ಬಾಗಿಕೊಂಡು ಪ್ರಾರ್ಥಿಸುತ್ತಾ ಇದ್ದೇವೋ ಎಂದು ಪರಶೀಲಿಸಬೇಕು. ನಾವು ನಮ್ಮ ವರ್ತನೆಗಳ ಬಗ್ಗೆ ನ್ಯಾಯ ನಿಷ್ಠೆಯಿಂದ ಈರೀತಿ ಪರಿಶೀಲಿಸುವುದಾದರೆ ನಮ್ಮ ಪ್ರತಿಜ್ಞೆ ಹೇಗೆ ಈಡೇರಿಸಿದ್ದೇವೆ ಎಂದು ನಮಗೆ ತಿಳಿಬಹುದಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮಿಂದ ಪಡಕೊಂಡ ಇನ್ನೊಂದು ಪ್ರತಿಜ್ಞೆ ಸುಳ್ಳು ಹೇಳುವುದಿಲ್ಲ ಎಂದಾಗಿದೆ. ಶ್ರೇಷ್ಠ ಸ್ವಭಾವಗುಣ ಹೇಗಿರಬೇಕೆಂದರೆ, ನಮ್ಮ ಜೀವ, ನಮ್ಮ ಸಂಪತ್ತು, ನಮ್ಮ ಗೌರವಗಳಿಗೆ ಹಾನಿ ಉಂಟಾಗುವ ಅಪಾಯವಿದ್ದಾಗಲೂ ನಾವು ಸುಳ್ಳು ಹೇಳಬಾರದು. ಸತ್ಯವನ್ನು ಎಂದೂ ಕೈ ಬಿಡಬಾರದು. ನಮ್ಮ ಸ್ವಂತ ಲಾಭವನ್ನು ಸತ್ಯಕ್ಕೋಸ್ಕರ ನಾವು ಬಲಿದಾನ ಮಾಡಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ''ಸುಳ್ಳು ಸಹ ಒಂದು ವಿಗ್ರಹವಾಗಿದೆ. ಅದರ ಮೇಲೆ ಭರವಸೆ ಇಡುವವನು ಅಲ್ಲಾಹನ ಮೇಲಿನ ಭರವಸೆಯನ್ನು ಬಿಟ್ಟುಬಿಡುತ್ತಾನೆ.'' ಒಟ್ಟಿನಲ್ಲಿ ಇಂತಹ ಸೂಕ್ಷ್ಮ ದೃಷ್ಟಿಯಿಂದ ನಾವು ನಮ್ಮನ್ನು ಪರಿಶೀಲಿಸಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು– ವ್ಯಭಿಚಾರದಿಂದ ನಿಮ್ಮನ್ನು ರಕ್ಷಿಸಿಕೊಳ್ಳಲು ಪ್ರತಿಜ್ಞೆ ಮಾಡಿರಿ. ವ್ಯಭಿಚಾರದ ಸಮೀಪ ಸಹ ಹೋಗಬೇಡಿರಿ ಎಂದು. ಇದರ ಅರ್ಥವೇನೆಂದರೆ ವ್ಯಭಿಚಾರದ ಬಗ್ಗೆ ಯೋಚನೆ ಉಂಟಾಗುವಂತಹ ಸಭೆ ಸಮಾರಂಭಗಳಿಂದಲೂ ದೂರವಿರಬೇಕು ಎಂದು. ಪಾಪವು ಸಂಭವಿಸುವ ಅಪಾಯವಿರುವ ಯಾವ ಮಾರ್ಗಗಳನ್ನೂ ಅವಲಂಬಿಸಬಾರದು. ಇಂದಿನ ಕಾಲದಲ್ಲಿ ಟಿ.ವಿ. ಇಂಟರ್‌ನೆಟ್ ಮೊದಲಾದವುಗಳಲ್ಲಿ ಎಂತಹ ಚಲಚ್ಚಿತ್ರಗಳು ಪ್ರಸಾರವಾಗುತ್ತವೆ ಎಂದರೆ ಅವುಗಳಿಂದ ದೃಷ್ಟಿಮೂಲಕ ವ್ಯಭಿಚಾರ ಮತ್ತು ಯೋಚನೆ ಮೂಲಕ ವ್ಯಭಿಚಾರವಾಗುತ್ತದೆಯಲ್ಲದೆ ಕೆಡುಕುಗಳನ್ನು ಮಾಡಲು ಮಾರ್ಗಗಳೂ ಉಂಟಾಗುತ್ತವೆ. ಇದು ಮನೆಗಳಲ್ಲಿ ಕುಟುಂಬ ಸಂಬಂಧಗಳು ಮುರಿದು ಹೋಗಲು ಕಾರಣವಾಗುತ್ತವೆ. ಇಂದಿನ ಸಮಾಜದಲ್ಲಿ ವಾಸಿಸುವಾಗ ಈ ಕೊಳಕುಗಳಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳಲು ತೀವ್ರವಾದ ಪ್ರಯತ್ನ ಮಾಡುವುದಿಲ್ಲವಾದರೆ ಯಾವುದೇ ರೀತಿಯ ಪರಿಶುದ್ಧತೆ ಗಳಿಸುವ ಖಾತರಿ ನೀಡಲಾಗುವುದಿಲ್ಲ. ನಾವು ಇದರ ಬಗ್ಗೆ ಬಹಳ ಚಿಂತಿಸಿ ಪರಿಶೀಲಿಸಬೇಕಾದ ಅಗತ್ಯವಿದೆ.

ಇನ್ನೊಂದು ಪ್ರತಿಜ್ಞೆ ಕೆಟ್ಟದಾಗಿ ದೃಷ್ಟಿ ಹಾಯಿಸುವುದರಿಂದ ರಕ್ಷಿಸಿಕೊಳ್ಳಬೇಕೆಂದಾಗಿದೆ. ಇದಕ್ಕೋಸ್ಕರ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ದೃಷ್ಟಿ ತಗ್ಗಿಸಿಡುವ ಆಜ್ಞೆ ನೀಡಿದ್ದಾನೆ. ಹಾಗೆ ಮಾಡಿದರೆ ಕೆಟ್ಟದೃಷ್ಟಿ ಬೀರುವ ಸಂಭವವೇ ಉಂಟಾಗಲಾರದು. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ''ಅಲ್ಲಾಹನು ನೋಡಬಾರದೆಂದು ನಿಷಿದ್ಧಗೊಳಿಸಿದವುಗಳನ್ನು ನೋಡದೆ, ದೃಷ್ಟಿಯನ್ನು ತಗ್ಗಿಸಿಡುವ ಕಣ್ಣಿಗೆ ನರಕಾಗ್ನಿ ನಿಷಿದ್ಧವಾಗಿದೆ.''

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ''ಪರಸ್ತ್ರೀಯರನ್ನು ಮತ್ತು ಅವರ ಸೌಂದರ್ಯದ ಸ್ಥಳಗಳನ್ನು ಖಂಡಿತವಾಗಿಯೂ ನೋಡಬಾರದೆಂದು ನಮಗೆ ತಾಕೀತು ಮಾಡಲಾಗಿದೆ. ಹತೋಟಿ ಇಲ್ಲದೆ ದೃಷ್ಟಿಸುವುದರಿಂದ ತಪ್ಪು ಸಂಭವಿಸಬಹುದು. ನಮ್ಮ ಕಣ್ಣುಗಳು ಮತ್ತು ನಮ್ಮ ಹೃದಯ ಅಪಾಯಗಳಿಂದ ರಕ್ಷಿಸಲ್ಪಡಲು ಅಲ್ಲಾಹನು ಉನ್ನತ ಮಟ್ಟದ ಉಪದೇಶ ನೀಡಿರುವನು. ಅಲ್ಲಾಹನು ಪುರುಷರಿಗೂ ಮಹಿಳೆಯರಿಗೂ ಕಡ್ಡಾಯ ಶರತ್ತುಗಳನ್ನು ವಿಧಿಸಿರುವನು. ಮಹಿಳೆಯರು ತಮ್ಮ ಸೌಂದರ್ಯವನ್ನು ಮರೆಮಾಡುವ ಆಜ್ಞೆಯೊಂದಿಗೆ ಪುರುಷರು ದೃಷ್ಟಿ ತಗ್ಗಿಸುವ ಬಗ್ಗೆ ಸಹ ಆಜ್ಞೆ ನೀಡಿರುವನು. ನಾವು ಈ ಆಜ್ಞೆಗಳನ್ನು ಎಷ್ಟರ ಮಟ್ಟಿಗೆ ಪಾಲಿಸುತ್ತಿದ್ದೇವೆ ಎಂದು ನಾವು ಚಿಂತಿಸಬೇಕಾಗಿದೆ.''

ಇನ್ನೊಂದು ಪ್ರತಿಜ್ಞೆ ನಾವು 'ಫಿಸ್ಖ್' ಮಾಡಲಾರೆವು ಎಂದಾಗಿದೆ. ಅಲ್ಲಾಹನ ಆಜ್ಞೆಗಳನ್ನು ಉಲ್ಲಂಘಿಸುವುದು ಫಿಸ್ಖ್ ಆಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿರುವರು– ಬೈಯುವುದು ನಿಂದಿಸುವುದು ಸಹ ಫಿಸ್ಖ್ ಆಗಿದೆ ಎಂದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಕಡೆ ಹೇಳಿರುವರು: ''ಪವಿತ್ರ ಖುರ್‌ಆನ್‌ನಿಂದ ಸಾಬೀತಾಗುವುದು ಏನೆಂದರೆ ಕಾಫಿರ್‌ನಿಗೆ (ಅವಿಶ್ವಾಸಿಗೆ) ಶಿಕ್ಷೆ ನೀಡುವ ಮೊದಲು ಫಾಸಿಖ್‌ನಿಗೆ (ಆಜ್ಞೆ ಉಲ್ಲಂಘಿಸುವವನಿಗೆ) ಶಿಕ್ಷೆ ನೀಡಲಾಗುವುದು ಎಂದಾಗಿದೆ. ಮುಸ್ಲಿಮರು ಮಿತಿಮೀರಿ ಫಿಸ್ಖ್ ಮಾಡಲು ತೊಡಗಿ ಮಿತಿಮೀರಿದಾಗ, ಅಲ್ಲಾಹನ ಆಜ್ಞೆಗಳ ಬಗ್ಗೆ ನಿರ್ಲಕ್ಷ್ಯರಾದಾಗ, ಮತ್ತು ಅಲ್ಲಾಹನ ಚಿಹ್ನೆಗಳ ಬಗ್ಗೆ ತಾತ್ಸಾರ ಅವರಲ್ಲಿ ಉದ್ಭವಿಸಿದಾಗ ಮತ್ತು ಅವರು ಲೌಕಿಕ ವ್ಯವಹಾರಗಳಲ್ಲಿ ಮತ್ತು ಅದರ ಸೌಂದರ್ಯಗಳಲ್ಲಿ ಮುಳುಗಿದಾಗ ಅಲ್ಲಾಹನು ಅವರನ್ನು ಹಲಾಕೂ ಖಾನ್ ಮತ್ತು ಚೆಂಗೀಸ್ ಖಾನ್ ಮೊದಲಾದವರ ಮೂಲಕ ನಾಶಗೊಳಿಸಿದನು.'' ಇಂದು ಸಹ ಲೋಕದಲ್ಲಿ ಮುಸ್ಲಿಮರ ಸ್ಥಿತಿ ಇದೇ ರೀತಿ ಇದೆ.

ಇನ್ನೊಂದು ಪ್ರತಿಜ್ಞೆ ದೌರ್ಜನ್ಯ ಮಾಡಲಾರೆವು ಎಂದಾಗಿದೆ. ದೌರ್ಜನ್ಯ ಅತ್ಯಂತ ದೊಡ್ಡ ಪಾಪ ಕೃತ್ಯವಾಗಿದೆ. ಅನ್ಯರ ಹಕ್ಕುಗಳನ್ನು ಅನ್ಯಾಯದಿಂದ ಅಪಹರಿಸುವುದು ಬಹಳ ದೊಡ್ಡ ಪಾಪವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕೇಳಲಾಯಿತು: ಯಾವ ದೌರ್ಜನ್ಯ ಎಲ್ಲದಕ್ಕಿಂತಲೂ ದೊಡ್ಡದು? ಆಗ ಮುಹಮ್ಮದ್

ಸಲ್ಲಲ್ಲಾಹು ಅಲೈಹಿವಸಲ್ಲಮ್ ಹೀಗೆ ಉತ್ತರ ಹೇಳಿದರು: "ಒಬ್ಬನು ತನ್ನ ಸಹೋದರನ ಪಾಲಿನ ಭೂಮಿಯಿಂದ ಒಂದು ಕೈ ಅಗಲದಷ್ಟು ಭೂಮಿಯನ್ನಾದರೂ ಅಪಹರಿಸುವುದು ಬಹಳ ದೊಡ್ಡ ಪಾಪವಾಗಿದೆ. ಹೀಗೆ ಅಪಹರಿಸಿದ ಭೂಮಿಯಿಂದ ಒಂದು ಸಣ್ಣ ಕಲ್ಲನ್ನು ಸಹ ಅನ್ಯಾಯದಿಂದ ಎತ್ತಿಕೊಂಡರೆ ಆ ಜಮೀನ ಕೆಳಗೆ ಎಷ್ಟು ಆಳವಾಗಿ ಭೂಮಿಯಿದ್ದರೂ ಅಲ್ಲಾಹನು ಅದರಿಂದ ಒಂದು ನೇಗಿಲನ್ನು ನಿರ್ಮಿಸಿ ಅವನ ಕುತ್ತಿಗೆಗೆ ಹಾಕುವನು." ಇದು ಬಹಳ ಭಯಾನಕವಾಗಿದೆ. ಮೊಕದ್ದಮೆ ಹೂಡಿ ತಮ್ಮ ಅಹಂಭಾವದ ಕಾರಣದಿಂದ ಅಥವಾ ತಮ್ಮ ಸ್ವಾರ್ಥ ಲಾಭಕ್ಕಾಗಿ ಜನರ ಹಕ್ಕುಗಳನ್ನು ಕಿತ್ತುಕೊಳ್ಳುವವರು ಇದರ ಬಗ್ಗೆ ಗಂಭೀರವಾಗಿ ಯೋಚಿಸಬೇಕಾಗಿದೆ.

ಇನ್ನೊಂದು ಪ್ರತಿಜ್ಞೆ ವಿಶ್ವಾಸದ್ರೋಹ ಮಾಡಬಾರದು ಎಂದಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ: "ನಿಮ್ಮೊಂದಿಗೆ ಯಾರಾದರೂ ವಿಶ್ವಾಸದ್ರೋಹ ಮಾಡಿದರೂ ಸಹ ನೀವು ಅವರಿಗೆ ವಿಶ್ವಾಸದ್ರೋಹ ಮಾಡಬೇಡಿರಿ." ಇಂತಹ ಮಟ್ಟವನ್ನು ನಾವು ತಲಪಬೇಕು. ವಿಶ್ವಾಸದ್ರೋಹದ ಯೋಚನೆ ಸಹ ಸತ್ಯವಿಶ್ವಾಸದ ಅಸ್ತಿಭಾರವನ್ನು ಅಲುಗಾಡಿಸುತ್ತದೆ.

ಇನ್ನೊಂದು ಪ್ರತಿಜ್ಞೆ ಪ್ರತಿಯೊಂದು ರೀತಿಯ ಗಲಭೆ ಗೊಂದಲಗಳಿಂದ ದೂರವಿರುವುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: "ಅಲ್ಲಾಹನು ಸ್ಥಾಪಿಸಿದ ಜಮಾಅತಿನಲ್ಲಿ ನೀವು ಸೇರಿದ ಕಾರಣದಿಂದ ಯಾರಾದರೂ ನಿಮ್ಮಿಂದ ದೂರವಾದರೆ ಅವರೊಡನೆ ನೀವು ಜಗಳ ಮಾಡಬೇಡಿರಿ. ಅವರಿಗೋಸ್ಕರ ಪ್ರಾರ್ಥಿಸಿರಿ. ನೋಡಿರಿ, ನಾನು ನಿಮಗೆ ಪದೇ ಪದೇ ಮಾರ್ಗದರ್ಶನ ನೀಡಬೇಕೆಂದು ಮತ್ತು ನೀವು ಗಲಭೆ ಗೊಂದಲಗಳಿಂದ ದೂರಸರಿಯಬೇಕೆಂದು, ಬೈಗಳನ್ನು ಆಲಿಸಿ ಸಹಿಸಬೇಕೆಂದು ಉಪದೇಶಿಸಲು ನನ್ನನ್ನು ಕಳುಹಿಸಲಾಗಿದೆ. ಕೆಡುಕಿಗೆ ಉತ್ತರ ಒಳಿತಿನಿಂದ ನೀಡಿರಿ. ಯಾರಾದರೂ ಜಗಳ ಮಾಡಲು ಸಿದ್ಧನಾದರೆ ನೀವು ಅಲ್ಲಿಂದ ಹೊರಟು ಹೋಗುವುದು ಉತ್ತಮವಾಗಿದೆ. ಉತ್ತರ ಮೃದುವಾಗಿ ನೀಡಿರಿ. ನನ್ನ ಜಮಾಅತಿಗೆ ಸೇರಿದ ಒಬ್ಬನು ಯಾರೊಡನೆಯಾದರೂ ಜಗಳ ಮಾಡಿದನೆಂದು ನನಗೆ ತಿಳಿದರೆ ಅದು ನನಗೆ ಇಷ್ಟವಾಗದು. ನಾನು ಅದನ್ನು ಖಂಡಿತ ಇಷ್ಟಪಡಲಾರೆ. ಲೋಕದಲ್ಲಿ ಒಂದು ಮಾದರಿಯಾಗಲು ಅಲ್ಲಾಹನು ಇಚ್ಛಿಸಿದ ಈ ಜಮಾಅತ್ ಹೀಗೆ ಆಗುವುದನ್ನು ಅಲ್ಲಾಹನು ಸಹ ಇಷ್ಟಪಡಲಾರ. ಇದು ತಖ್ವದ ಮಾರ್ಗವಲ್ಲ."

ಇನ್ನೊಂದು ಪ್ರತಿಜ್ಞೆ ವಿದ್ರೋಹ ಅಥವಾ ವಂಚನೆ ಮಾಡದಿರುವ ಬಗ್ಗೆಯಾಗಿದೆ. ವಿದ್ರೋಹದ ವಾಸನೆ ಬರುವಂತಹ ಯಾವುದೇ ಕೆಲಸ ಮಾಡಬಾರದೆಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ.

ಶಾರೀರಿಕ ಭಾವೋದ್ವೇಗಗಳಿಗೆ ಬಲಿಯಾಗಲಾರೆ ಎಂದು ಪ್ರತಿಜ್ಞೆ ಮಾಡಲು ಸಹ ಹೇಳಲಾಗಿದೆ. ಇಂದಿನ ಕಾಲದಲ್ಲಿ ಟಿ.ವಿ. ಮತ್ತು ಇಂಟರ್‌ನೆಟ್ ಮೂಲಕ ಶಾರೀರಿಕ ಭಾವೋದ್ವೇಗಗಳಿಗೆ ಪರಾಜಿತನಾಗುವ ಬಹಳ ಸಂದರ್ಭಗಳು ಇವೆ. ಶಾರೀರಿಕ ಭಾವೋದ್ವೇಗಗಳನ್ನು ಉದ್ರೇಕಿಸುವ ಅತ್ಯಂತ ಚಿಕ್ಕ ವಿಷಯಗಳಿಂದಲೂ ತನ್ನನ್ನು ರಕ್ಷಿಸಿಕೊಳ್ಳಲು ತೀವ್ರವಾಗಿ ಪ್ರಯತ್ನ ಮಾಡಬೇಕಾದುದು ಪ್ರತಿಯೊಬ್ಬ ಅಹ್ಮದಿಗೆ ಕಡ್ಡಾಯವಾಗಿದೆ.

ಇನ್ನೊಂದು ಪ್ರತಿಜ್ಞೆ ಐದು ಹೊತ್ತಿನ ನಮಾಝ್ ಎಲ್ಲಾ ಶರತ್ತುಗಳೊಂದಿಗೆ ಅನುಷ್ಠಿಸುವ ಬಗ್ಗೆಯಾಗಿದೆ. ಹತ್ತು ವರ್ಷದ ಮಗು ಸಹ ಕಡ್ಡಾಯವಾಗಿ ನಮಾಝ್ ಮಾಡಬೇಕು. ತಂದೆ ತಾಯಂದಿರು ಇದರ ಬಗ್ಗೆ ಮೇಲ್ವಿಚಾರಣೆ ನಡೆಸಬೇಕು. ತಂದೆ ತಾಯಂದಿರು ಸ್ವತಃ ನಮಾಝ್ ಮಾಡುವವರಾದರೆ ಮಾತ್ರ ಈ ಕೆಲಸ ಸರಿಯಾಗಿ ನಿಭಾಯಿಸಬಹುದು. ಪುರುಷರು ಶರತ್ತುಗಳನ್ನು ಪಾಲಿಸಿ ಐದು ಹೊತ್ತು ನಮಾಝ್ ಅನುಷ್ಠಿಸಬೇಕು ಎನ್ನುವುದರ ಅರ್ಥ ಅವರು ಮಸ್‌ಜಿದ್‌ಗೆ ಹೋಗಿ ಸಾಮೂಹಿಕವಾಗಿ ನಮಾಝ್ ಅನುಷ್ಠಿಸಬೇಕು ಎಂದಾಗಿದೆ- ರೋಗ ಅಥವಾ ಬೇರೆ ಅನುವದನೀಯ ಕಾರಣಗಳ ಸಮಯಗಳಲ್ಲಿ ಹೊರತು. ಈ ಆಜ್ಞೆ ಪಾಲಿಸಿದರೆ ನಮ್ಮ ಮಸ್‌ಜಿದ್‌ಗಳು ನಮಾಝ್ ಮಾಡುವವರಿಂದ ತುಂಬುವುದು. ಕೇವಲ ಹುದ್ದೇದಾರರು ಈ ಆಜ್ಞೆ ಪಾಲಿಸಲು ಪ್ರಾರಂಭಿಸಿದರೆ ಸಹ ಬಹಳ ಉತ್ತಮ ಪರಿಣಾಮ ಉಂಟಾಗುವುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಯಾರು ನಮಾಝ್ ಮಾಡುವುದರಿಂದ ಬಿಡುಗಡೆ ಹೊಂದಲು ಬಯಸುತ್ತಾನೋ ಅವನು ಮೃಗಗಳಿಗಿಂತ ಹೆಚ್ಚಿನದೇನು ಮಾಡುತ್ತಾನೆ? ಅಂತಹ ವ್ಯಕ್ತಿ ಮತ್ತು ಮೃಗಗಳ ಮಧ್ಯೆ ವ್ಯತ್ಯಾಸವೇನೂ ಇಲ್ಲ." ಅಹ್ಮದಿಯರು ಇದರ ಬಗ್ಗೆ ಬಹಳ ಪ್ರಯತ್ನ ಮಾಡುವ ಆವಶ್ಯಕತೆ ಇದೆ.

ಇನ್ನೊಂದು ಪ್ರತಿಜ್ಞೆ ತಹಜ್ಜುದ್ ನಮಾಝ್ ಮಾಡುವೆವು ಎಂದಾಗಿದೆ. ಇದು ಹಿಂದಿನ ಕಾಲದ ಸಾತ್ವಿಕರು ಅನುಷ್ಠಿಸಿದ ರೀತಿಯಾಗಿದೆ. ಇದು ದೇವ ಸಾಮೀಪ್ಯ ಗಳಿಸುವ ಮಾರ್ಗವಾಗಿದೆ. ಇದರ ಅನುಷ್ಠಾನ ಪಾಪದಿಂದ ತಡೆಯುತ್ತದೆ ಕೆಡುಕುಗಳನ್ನು ಕೊನೆಗೊಳಿಸುತ್ತದೆ. ಶಾರೀರಿಕ ರೋಗಗಳಿಂದಲೂ ರಕ್ಷಿಸುತ್ತದೆ. ಇದರಲ್ಲಿ ಆಧ್ಯಾತ್ಮಿಕ ಚಿಕಿತ್ಸೆ ಮಾತ್ರವಲ್ಲ ಶಾರೀರಿಕ ಚಿಕಿತ್ಸೆಯೂ ಇದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: ತಹಜ್ಜುದ್ ನಮಾಝನ್ನು ಕಡ್ಡಾಯವಾಗಿ ಅನುಷ್ಠಿಸಿರಿ. ಹೆಚ್ಚು ಸಾಧ್ಯವಿಲ್ಲವಾದರೆ ಎರಡು ರಕಅತ್‌ಗಳನ್ನಾದರೂ ಅನುಷ್ಠಿಸಿರಿ. ಯಾಕೆಂದರೆ ಅದರಿಂದ ದುಆ ಮಾಡಲು ಹೆಚ್ಚು ಸಂದರ್ಭ ಸಿಗುತ್ತದೆ. ಆ ಸಮಯದಲ್ಲಿ ಮಾಡುವ ದುಆಗಳಿಗೆ ಒಂದು ವಿಶಿಷ್ಟ ಪ್ರಭಾವವಿರುತ್ತದೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ದುರೂದ್ ಪ್ರಾರ್ಥನೆ ಮಾಡುವ ಬಗ್ಗೆ ಸಹ ನಾವು ಪ್ರತಿಜ್ಞೆ ಮಾಡಿದ್ದೇವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿರುವರು: "ಯಾರು ನನಗೆ ದುರೂದ್ ಪ್ರಾರ್ಥನೆ ಅರ್ಪಿಸುತ್ತಾರೋ

ಅವನಿಗೆ ಅಲ್ಲಾಹನು ಹತ್ತು ಪಟ್ಟು ಅನುಗ್ರಹಗಳನ್ನು ಸುರಿಸುವನು.''

ದುರೂದ್ ದುಆ ಬಹಳ ಮುಖ್ಯವಾಗಿದೆ. ಪ್ರಾರ್ಥನೆಗಳು ಅಂಗೀಕಾರ ಪಡೆಯಲು ಸಹ ದುರೂದ್ ಅತ್ಯಂತ ಆವಶ್ಯಕವಾಗಿದೆ. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹೇಳಿದರು: 'ಪ್ರಾರ್ಥನೆ ಮಾಡುವಾಗ ಅದು ಭೂಮಿ ಮತ್ತು ಆಕಾಶದ ಮಧ್ಯೆ ನಿಲ್ಲುತ್ತದೆ. ನೀವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ದುರೂದ್ ಪ್ರಾರ್ಥನೆ ಅರ್ಪಿಸದಿದ್ದರೆ ಅದರ ಒಂದು ಭಾಗ ಸಹ ಮೇಲೇರಿ ಹೋಗದು.'

ಇನ್ನೊಂದು ಪ್ರತಿಜ್ಞೆ ಇಸ್ತಿಗ್‌ಫಾರ್ ಪ್ರಾರ್ಥನೆ ಯಾವಾಗಲೂ ಮಾಡುವೆವು ಎಂದು. ಒಂದು ಹದೀಸಿನಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: 'ಯಾರು ಇಸ್ತಿಗ್‌ಫಾರ್ ಪ್ರಾರ್ಥನೆಗೆ ಅಂಟಿಕೊಂಡು ಇರುತ್ತಾನೋ ಅವನಿಗೆ ಕಷ್ಟದಿಂದ ಹೊರಗೆ ಬರುವ ಮಾರ್ಗವನ್ನು ಅಲ್ಲಾಹನು ತೋರಿಸುವನು. ಅವನಿಗೆ ಪ್ರತಿಯೊಂದು ಕಷ್ಟದಿಂದ ಸುಖದ ದಾರಿ ತೆರೆದು ಕೊಡುವನು. ಅವನು ಊಹಿಸದ ಮಾರ್ಗಗಳಿಂದ ಅವನಿಗೆ ಆಹಾರ ಲಭಿಸುವುದು.' ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: 'ಅಲ್ಲಾಹನು ಯಾವಾಗಲೂ ಇಸ್ತಿಗ್‌ಫಾರ್‌ಗೆ ಆದ್ಯತೆ ನೀಡಲು ಹೇಳಿದ್ದಾನೆ. ಮನುಷ್ಯನು ಮಾಡುವ ಪ್ರತಿಯೊಂದು ಪಾಪ ಕೃತ್ಯಕ್ಕೆ, ಅದು ಬಾಹ್ಯವಾಗಿರಲಿ ರಹಸ್ಯವಾಗಿರಲಿ, ಅವನಿಗೆ ತಿಳಿದಿರಲಿ ತಿಳಿಯದಿರಲಿ ಇಸ್ತಿಗ್‌ಫಾರ್ ಮಾಡುತ್ತಾ ಇರಬೇಕು.'

ಇನ್ನೊಂದು ಪ್ರತಿಜ್ಞೆ ನಾವು ಮಾಡಿರುವುದು ಅಲ್ಲಾಹನು ನಮಗೆ ನೀಡಿದ ಅನುಗ್ರಹಗಳನ್ನು ನೆನಪಿನಲ್ಲಿಡುವೆವು ಎಂದಾಗಿದೆ. ಅಲ್ಲಾಹನು ನಮಗೆ ನೀಡಿದ ಅನುಗ್ರಹಗಳಲ್ಲಿ ಅತ್ಯಂತ ದೊಡ್ಡ ಅನುಗ್ರಹ ಈ ಕಾಲಘಟ್ಟದ ಇಮಾಮರನ್ನು ನಂಬಲು ನಮಗೆ ಭಾಗ್ಯ ನೀಡಿರುವುದಾಗಿದೆ. ಅಲ್ಲಾಹನು ನಮಗೆ ನೀಡಿದ ಈ ಅನುಗ್ರಹವನ್ನು ನಾವು ನೆನಪಿಸುತ್ತಾ ಇದ್ದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ವಿಶೇಷ ಸಂಬಂಧ ಹೊಂದುವ ಬಗ್ಗೆ ನಮ್ಮಲ್ಲಿ ಯಾವಾಗಲೂ ವಿಶೇಷ ಕಾಳಜಿ ಉಂಟಾಗುವುದು. ಅವರು ಹೇಳಿದ ಪ್ರಕಾರ ವರ್ತಿಸುವ ಬಗ್ಗೆ ಯಾವಾಗಲೂ ನಮಗೆ ಗಮನ ಇರುವುದು.

ಇನ್ನೊಂದು ಪ್ರತಿಜ್ಞೆ ಯಾವಾಗಲೂ ಅಲ್ಲಾಹನನ್ನು ಸ್ತುತಿಸುತ್ತಾ ಇರುವೆನೆಂದಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದಾರೆ: 'ಯಾವುದಾದರೂ ಮುಖ್ಯ ಕೆಲಸವನ್ನು ಅಲ್ಲಾಹನಿಗೆ ಸ್ತುತಿ ಸಲ್ಲಿಸದೆ ಪ್ರಾರಂಭಿಸಿದರೆ ಅದು ಅನುಗ್ರಹ ರಹಿತವಾಗುವುದು. ಅದು ನಿಷ್ಫಲವಾಗುವುದು.' ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದಾರೆ: 'ಯಾವ ವ್ಯಕ್ತಿ ಸ್ವಲ್ಪ ಲಭಿಸಿದರೆ ಕೃತಜ್ಞತೆ ಸೂಚಿಸುವುದಿಲ್ಲವೋ ಅವನು ಹೆಚ್ಚು ಲಭಿಸಿದರೂ ಕೃತಜ್ಞತೆ ಸೂಚಿಸಲಾರನು. ಯಾರು ಜನರಿಗೆ ಕೃತಜ್ಞತೆ ಅರ್ಪಿಸುವುದಿಲ್ಲವೋ ಅವರು ಅಲ್ಲಾಹನಿಗೂ ಕೃತಜ್ಞತೆ ಅರ್ಪಿಸಲಾರರು.' ಅಲ್ಲಾಹನನ್ನು ಹೇಗೆ ಸ್ತುತಿಸಬೇಕೆಂದರೆ ಅಲ್ಲಾಹನ ಸೃಷ್ಟಿಗಳು ಮಾಡಿದ ಉಪಕಾರಗಳಿಗೂ ಕೃತಜ್ಞತೆ ಅರ್ಪಿಸಬೇಕು.

ಇನ್ನೊಂದು ಪ್ರತಿಜ್ಞೆ ನಾವು ಮಾಡಿರುವುದು– ಸಾಮಾನ್ಯವಾಗಿ ಅಲ್ಲಾಹನ ಯಾವ ಸೃಷ್ಟಿಗಳಿಗೂ ಕಷ್ಟಕೊಡಲಾರೆ ಎಂದು. ಮತ್ತೊಂದು ಪ್ರತಿಜ್ಞೆ ನಾವು ವಿಶಿಷ್ಟವಾಗಿ ಮುಸ್ಲಿಮರಿಗೆ ನಮ್ಮ ಭಾವೋದ್ವೇಗಗಳಿಂದ ತೊಂದರೆ ಕೊಡಲಾರೆವೆಂದೂ ಆಗಿದೆ. ಸಾಧ್ಯವಿರುವಷ್ಟು ಮಟ್ಟಿಗೆ ಕ್ಷಮೆಯನ್ನು ನೀಡಬೇಕು. ಆದರೆ ಸುಧಾರಣೆಗೋಸ್ಕರ ಯಾರಿಗಾದರೂ ಶಿಕ್ಷೆ ನೀಡುವುದು ಆವಶ್ಯಕವಾದರೆ ಅದಕ್ಕೋಸ್ಕರ ಸ್ವತಃ ಮುನ್ನುಗ್ಗಬಾರದು. ಸಂಬಂಧಪಟ್ಟ ಮೇಲಧಿಕಾರಿಗಳಿಗೆ ಅದರ ಬಗ್ಗೆ ದೂರು ನೀಡಬೇಕು. ಯಾರೊಂದಿಗೂ ಪ್ರತೀಕಾರದಿಂದ ವರ್ತಿಸಬಾರದು. ಯಾವಾಗಲೂ ವಿನಯದಿಂದಲೂ ಸೌಮ್ಯತೆಯಿಂದಲೂ ವರ್ತಿಸಬೇಕು.

ಇನ್ನೊಂದು ಪ್ರತಿಜ್ಞೆ ಯಾವಾಗಲೂ ಅಲ್ಲಾಹನಿಗೆ ನಿಷ್ಠನಾಗಿರುವೆನೆಂದಾಗಿದೆ. ಸಂತೋಷ ಮತ್ತು ಕಷ್ಟ ಪ್ರತಿಯೊಂದು ಸ್ಥಿತಿಯಲ್ಲಿ ಅಲ್ಲಾಹನ ಮೇಲೆ ಭರವಸೆ ಇಡಬೇಕು. ಪ್ರತಿಯೊಂದು ಸ್ಥಿತಿಯಲ್ಲೂ ಅಲ್ಲಾಹನ ಕಡೆಗೆಯೇ ದಾವಿಸಬೇಕಾದುದು ಸತ್ಯವಿಶ್ವಾಸಿಯ ಕೆಲಸವಾಗಿದೆ. ನಾವು ಹೀಗೆ ಮಾಡುವಾಗ ನಾವು ಇನ್ನೊಂದು ಪ್ರತಿಜ್ಞೆಯನ್ನು ಸಹ ಈಡೇರಿಸುತ್ತೇವೆ. ಅದೇನೆಂದರೆ, ಅಲ್ಲಾಹನ ಮಾರ್ಗದಲ್ಲಿ ಪ್ರತಿಯೊಂದು ಅಪಮಾನ ಮತ್ತು ಕಷ್ಟ ಅನುಭವಿಸಲು ನಾವು ಸಿದ್ಧರಾಗಿರುವೆವು ಎಂಬ ಪ್ರತಿಜ್ಞೆ. ಯಾವುದಾದರೂ ವಿಪತ್ತು ಬಂದೆರಗಿದರೆ ನಾವು ದೇವನಿಂದ ವಿಮುಖರಾಗಲಾರೆವು ಎಂದು ಸಹ ಪ್ರತಿಜ್ಞೆ ಮಾಡಿರುವೆವು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: 'ನನ್ನವರಾದವರು ನನ್ನಿಂದ ಬೇರೆಯಾಗಲಾರರು. ಕಷ್ಟ, ಜನರ ಬೈಗಳು, ದೈವಿಕ ಪರೀಕ್ಷೆಗಳು ಮೊದಲಾದವುಗಳ ಕಾರಣದಿಂದಲೂ ಅವರು ಬೇರ್ಪಟ್ಟು ಹೋಗಲಾರರು.' ನಾವು ಅಲ್ಲಾಹನಿಗೋಸ್ಕರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಸಂಬಂಧ ಹೊಂದಿದವರಾಗಿದ್ದೇವೆ. ನಾವು ಅದಕ್ಕಾಗಿ ತುಂಬಾ ಪ್ರಯತ್ನ ಮಾಡುತ್ತಾ ಇರಬೇಕು. ನಮಗೆ ಕಷ್ಟ ನೀಡಲ್ಪಟ್ಟರೂ ನಾವು ಅದರ ಬಗ್ಗೆ ಲಕ್ಷ್ಯ ನೀಡಬಾರದು. ಇದು ನಮ್ಮ ಪ್ರತಿಜ್ಞೆಯಾಗಿದೆ.

ಇನ್ನೊಂದು ಪ್ರತಿಜ್ಞೆ ಆಚಾರಗಳನ್ನು ಅನುಸರಿಸಲಾರೆವು ಎಂದಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ: 'ಒಬ್ಬನು ಧರ್ಮದ ವಿಷಯದಲ್ಲಿ ಧರ್ಮಕ್ಕೆ ಸಂಬಂಧಿಸದ ಒಂದು ನವೀನಾಚಾರ ಸೃಷ್ಠಿಸುವುದಾದರೆ ಅದು ತಿರಸ್ಕರಿಸಲ್ಪಡಬೇಕಾಗಿದೆ.' ಇಂದಿನ

ಕಾಲದಲ್ಲಿ ವಿವಾಹಕ್ಕೆ ಸಂಬಂಧಿಸಿ ಹಲವಾರು ತಪ್ಪು ನವೀನಾಚಾರಗಳು ಪ್ರಾರಂಭವಾಗಿವೆ. ಅಹ್ಮದಿಯರು ಅವುಗಳಿಂದೆಲ್ಲಾ ಸುರಕ್ಷಿತರಾಗಿರಬೇಕಾಗಿದೆ.

ಇನ್ನೊಂದು ಪ್ರತಿಜ್ಞೆ ಆಶಾಭಿಲಾಷೆಗಳನ್ನು ಹಿಂಬಾಲಿಸಲಾರೆನೆಂದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: 'ಯಾರು ತನ್ನ ಪ್ರಭುವಿನ ಮುಂದೆ ನಿಲ್ಲಲು ಹೆದರುತ್ತಾನೋ ಮತ್ತು ತನ್ನ ಶಾರೀರಿಕ ಆಶಾಭಿಲಾಷೆಗಳನ್ನು ತಡೆಯುತ್ತಾನೋ ಅವನ ಸ್ಥಾನ ಸ್ವರ್ಗವಾಗಿದೆ.'

ಇನ್ನೊಂದು ಪ್ರತಿಜ್ಞೆ ಪವಿತ್ರ ಖುರ್ಆನಿನ ಆಡಳಿತೆಯನ್ನು ಸಂಪೂರ್ಣವಾಗಿ ತನ್ನ ತಲೆಯಲ್ಲಿ ಹೊತ್ತು ಕೊಳ್ಳುವೆನು ಎಂದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: 'ನೀವು ಜಾಗರೂಕರಾಗಿರಿ. ಅಲ್ಲಾಹನ ಉಪದೇಶ ಮತ್ತು ಪವಿತ್ರ ಖುರ್ಆನಿನ ಮಾರ್ಗದರ್ಶನದ ವಿರುದ್ಧ ಒಂದು ಹೆಜ್ಜೆಯನ್ನಾದರೂ ಇಡಬೇಡಿರಿ. ನಾನು ನಿಮಗೆ ಸತ್ಯವಾಗಿ ಹೇಳುತ್ತೇನೆ ಯಾರು ಪವಿತ್ರ ಖುರ್ಆನಿನ ಏಳುನೂರು ಆಜ್ಞೆಗಳ ಪೈಕಿ ಒಂದು ಚಿಕ್ಕ ಆಜ್ಞೆಯನ್ನೂ ಉಲ್ಲಂಘಿಸುತ್ತಾನೋ ಅವನು ಮೋಕ್ಷದ ಬಾಗಿಲನ್ನು ತನ್ನ ಕೈಗಳಿಂದ ತನಗೆ ಮುಚ್ಚುತ್ತಾನೆ.'

ಇನ್ನೊಂದು ಪ್ರತಿಜ್ಞೆ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಪ್ರತಿಯೊಂದು ಆಜ್ಞೆಯನ್ನು ತನಗೆ ಮಾರ್ಗದೀಪವನ್ನಾಗಿ ಮಾಡುವೆನೆಂಬುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: 'ನಮಗೆ ಒಬ್ಬನೇ ಸಂದೇಶವಾಹಕರಿದ್ದಾರೆ. ಒಂದೇ ಒಂದು ಖುರ್ಆನ್ ಆ ಸಂದೇಶವಾಹಕರಿಗೆ ಅವತೀರ್ಣಗೊಂಡಿತು. ಅದನ್ನು ಅನುಸರಿಸಿ ನಾವು ಅಲ್ಲಾಹನ ಸಾಮೀಪ್ಯಗಳಿಸಬಲ್ಲೆವು.' ನಾವು ಇದಕ್ಕೋಸ್ಕರ ಪ್ರಯತ್ನ ಮಾಡಬೇಕು.

ಇನ್ನೊಂದು ಪ್ರತಿಜ್ಞೆ ಅಹಂಭಾವ ಮತ್ತು ಅಹಂಕಾರವನ್ನು ಪೂರ್ಣವಾಗಿ ತ್ಯಜಿಸುವೆವು ಎಂದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: "ನಾನು ಸತ್ಯವಾಗಿ ಹೇಳುತ್ತೇನೆ. ಖಿಯಾಮತ್ ದಿನ ಶಿರ್ಕ್ ನಂತರ ಅಹಂಕಾರವು ಅತ್ಯಂತ ಕೆಟ್ಟದ್ದೆಂದು ಪರಿಗಣಿಸಲ್ಪಡುವುದು. ಇದು ಎಂತಹ ಕೆಡುಕೆಂದರೆ ಇಹಪರ ಲೋಕದಲ್ಲಿ ಮನುಷ್ಯನನ್ನು ಹೀನೈಸುತ್ತದೆ. ನಾನು ನನ್ನ ಜಮಾಅತಿಗೆ ಉಪದೇಶಿಸುತ್ತೇನೆ: ಅಹಂಕಾರದಿಂದ ನೀವು ನಿಮ್ಮನ್ನು ರಕ್ಷಿಸಿಕೊಳ್ಳಿರಿ. ಏಕೆಂದರೆ ಮಹೋನ್ನತನಾದ ನಮ್ಮ ಅಲ್ಲಾಹನ ದೃಷ್ಟಿಯಲ್ಲಿ ಅದು ಅತ್ಯಂತ ಅಸಹ್ಯವಾಗಿದೆ."

ಇನ್ನೊಂದು ಪ್ರತಿಜ್ಞೆ ವಿನಯದಿಂದ ವರ್ತಿಸುವ ಬಗ್ಗೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ: ಯಾರು ಅಲ್ಲಾಹನಿಗೋಸ್ಕರ ವಿನಯವನ್ನು ಅವಲಂಬಿಸಿದನೋ ಅಲ್ಲಾಹನು ಅವನಿಗೆ ಉನ್ನತ ಪದವಿ ನೀಡುವನು ಮತ್ತು ಅವನಿಗೆ **ಇಲ್ಲಿಯ್ಯೀನ್**ನಲ್ಲಿ ಸ್ಥಾನ ನೀಡುವನು.

ಇನ್ನೊಂದು ಪ್ರತಿಜ್ಞೆ ನಾವು ಯಾವಾಗಲೂ ಹರ್ಷಚಿತ್ತರಾಗಿರುವೆವು ಎಂದಾಗಿದೆ. ಇದು ಸಹ ನೆನಪಿನಲ್ಲಿಟ್ಟುಕೊಳ್ಳಬೇಕಾದ ಒಂದು ಮುಖ್ಯ ಸಂಗತಿಯಾಗಿದೆ. ಇನ್ನೊಂದು ಪ್ರತಿಜ್ಞೆ ನಿರಾಡಂಬರ ಜೀವನ ನಡೆಸುವೆನೆಂಬುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: ಅಲ್ಲಾಹನ ಸಾಮೀಪ್ಯ ನೀವು ಬಯಸುವುದಾದರೆ ಬಡವರ ಹೃದಯಗಳ ಸಮೀಪ ನೀವು ಅದನ್ನು ಹುಡುಕಿರಿ.

ಇನ್ನೊಂದು ಪ್ರತಿಜ್ಞೆ ಧರ್ಮ ಮತ್ತು ಧರ್ಮದ ಗೌರವ ಹಾಗೂ ಇಸ್ಲಾಮಿನ ಬಗ್ಗೆ ಸಹಾನುಭೂತಿ ಇವುಗಳನ್ನು ನನ್ನ ಜೀವ, ಸಂಪತ್ತು ಮತ್ತು ಮಕ್ಕಳಿಗಿಂತ ಹೆಚ್ಚು ಪ್ರಿಯಕರವಾಗಿ ಭಾವಿಸುವೆನೆಂಬುದು. ಮತ್ತೊಂದು ಪ್ರತಿಜ್ಞೆ ಅಲ್ಲಾಹನಿಗೋಸ್ಕರ ಅಲ್ಲಾಹನ ಸೃಷ್ಟಿಗಳೊಂದಿಗೆ ಯಾವಾಗಲೂ ಸಹಾನುಭೂತಿ ಹೊಂದುವೆನು ಎಂದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನೆನಪಿಡಿರಿ, ಅಲ್ಲಾಹನು ಒಳಿತುಗಳನ್ನು ಬಹಳ ಇಷ್ಟಪಡುತ್ತಾನೆ. ಅವನ ಸೃಷ್ಟಿಗಳೊಂದಿಗೆ ಸಹಾನುಭೂತಿ ಹೊಂದಲು ಅವನು ಬಯಸುತ್ತಾನೆ. ಆದುದರಿಂದ ನನ್ನೊಂದಿಗೆ ಸಂಬಂಧ ಹೊಂದಿರುವವರು ನೆನಪಿಡಿರಿ ನೀವು ಪ್ರತಿಯೊಬ್ಬ ಮನುಷ್ಯನೊಂದಿಗೆ– ಅವನು ಯಾವ ಧರ್ಮದವನಾದರೂ ಸರಿ ಸಹಾನುಭೂತಿ ಹೊಂದಿರಿ. ತಾರತಮ್ಯ ಭಾವನೆ ಇಲ್ಲದೆ ಪ್ರತಿಯೊಬ್ಬನಿಗೆ ಒಳಿತನ್ನು ಮಾಡಿರಿ. ಇದೇ ಪವಿತ್ರ ಖುರ್ಆನಿನ ಉಪದೇಶವಾಗಿದೆ."

ಇನ್ನೊಂದು ಪ್ರತಿಜ್ಞೆ ಅಲ್ಲಾಹನು ನಮಗೆ ದಯಪಾಲಿಸಿದ ಶಕ್ತಿಗಳಿಂದ ಮಾನವ ಸಮುದಾಯಕ್ಕೆ ಲಾಭವನ್ನು ತಲಪಿಸುವೆನೆಂದಾಗಿದೆ. ಲೋಕದ ಆಧ್ಯಾತ್ಮಿಕ ಅಭಿವೃದ್ಧಿಗೆ ಪ್ರಯತ್ನ ಮಾಡುವುದು ಸಹ ಮಾನವರಿಗೆ ಲಾಭವನ್ನು ಉಂಟುಮಾಡುವುದರಲ್ಲಿ ಸೇರಿದೆ. ಮಾನವರಿಗೆ ಲೌಕಿಕ ಮತ್ತು ಆಧ್ಯಾತ್ಮಿಕ ಲಾಭ ಒಸಗಿಸುವುದು ನಮ್ಮ ಕಡ್ಡಾಯ ಕರ್ತವ್ಯವಾಗಿದೆ. ನಾವು ಮಾನವರಿಗೆ ಸಹಾನುಭೂತಿ ತೋರಿಸಿ ಅವರಿಗೆ ಲೌಕಿಕ ಸಹಾಯ ನೀಡಬೇಕಲ್ಲದೆ, ಸೃಷ್ಟಿಗಳ ಸೇವೆ ಮಾಡಬೇಕಲ್ಲದೆ ಮಾನವರ ಪ್ರಯೋಜನಕ್ಕಾಗಿ ತಬ್ಲೀಗ್ ಮಾಡುವುದು ಸಹ ಅಹ್ಮದಿಯರ ಕಡ್ಡಾಯ ಕರ್ತವ್ಯವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅಹ್ಮದಿಯರಿಂದ ಸ್ವೀಕರಿಸಿದ ಮತ್ತೊಂದು ಪ್ರತಿಜ್ಞೆ, ಅವರೊಂದಿಗೆ ಅಲ್ಲಾಹನಿಗೋಸ್ಕರ ಎಂತಹ ಸಮೀಪ ಸಂಬಂಧ ಸ್ಥಾಪಿಸಬೇಕೆಂದರೆ, ಅದರಲ್ಲಿ ಅನುಸರಣೆಯ ಎಂತಹ ಉನ್ನತ ಸ್ಥಿತಿ ಇರಬೇಕೆಂದರೆ ಅದು ಇತರ ಯಾವುದೇ ಕುಟುಂಬ ಸಂಬಂಧಗಳಲ್ಲಿ ಮತ್ತು ಸೇವಾ ವ್ಯವಸ್ಥೆಯಲ್ಲಿ ಇರದಂತಹದಾಗಿರಬೇಕು. ನಮ್ಮ ಧಾರ್ಮಿಕ, ಜ್ಞಾನ ಸಂಬಂಧದ, ಆಧ್ಯಾತ್ಮಿಕ ಮತ್ತು ಕರ್ಮಪರವಾದ ತರಬೇತಿಗೋಸ್ಕರ ಅವರು ನೀಡಿದ ಉಪದೇಶಗಳನ್ನು ನಾವು ಅನುಸರಿಸಬೇಕಾಗಿದೆ. ಅವರ ನಂತರ ಅಹ್ಮದಿಯಾ ಖಿಲಾಫತ್ ಮೂಲಕ ಜಮಾಅತಿನ ಸದಸ್ಯರಿಗೆ ಶರೀಅತನ್ನು ಸ್ಥಾಪಿಸುವುದಕ್ಕೆ ಆವಶ್ಯಕವಾದುದು ತಲಪುತ್ತಾ ಇದೆ. ಅವು

ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳು ಮತ್ತು ನಡೆವಳಿಕೆಗಳಿಗೆ ಅನುಸಾರವಾಗಿವೆ. ಇದರ ಹೊರತು ನಮ್ಮ ಅಭಿವೃದ್ಧಿ ಆಗಲಾರದು. ನಮ್ಮ ಐಕ್ಯ ಸ್ಥಾಪಿತವಾಗಿರಲಾರದು.

ಸಂಕ್ಷಿಪ್ತವಾಗಿ, ನಾವು ಕಳೆದ ವರ್ಷ ನಮ್ಮ ಪ್ರತಿಜ್ಞೆಗಳನ್ನು ಯಾವ ರೀತಿ ಈಡೇರಿಸಿದೆವು ಎಂದು ಪರಿಶೀಲಿಸಬೇಕಾಗಿದೆ. ಅದರಲ್ಲಿ ಏನಾದರೂ ಕೊರತೆಗಳಿದ್ದರೆ ಈ ವರ್ಷ ಆ ಕೊರತೆಗಳನ್ನು ಹೇಗೆ ನೀಗಿಸುವುದೆಂದು ಸಹ ನಾವು ಚಿಂತಿಸಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಯಾರು ನಮ್ಮ ಉಪದೇಶಗಳನ್ನು ತನ್ನ ಜೀವನಕ್ಕೆ ಮಾರ್ಗದರ್ಶಿಯನ್ನಾಗಿ ಮಾಡುತ್ತಾನೋ ಅವನೇ ನಮ್ಮ ಜಮಾಅತಿಗೆ ಸೇರಿದವನಾಗುತ್ತಾನೆ. ಅವನು ತನ್ನ ಶಕ್ತಿ ಮತ್ತು ಪ್ರಯತ್ನ ಪ್ರಕಾರ ಅವುಗಳನ್ನು ಕಾರ್ಯರೂಪಕ್ಕೆ ತರಬೇಕಾಗಿದೆ."

ಅಲ್ಲಾಹನು ಕಳೆದ ವರ್ಷದ ನಮ್ಮ ಬಲಹೀನತೆಗಳನ್ನು ಕ್ಷಮಿಸಿ ನಮಗೆ ದಯೆದೋರುವಂತಾಗಲು ನಾವು ಈ ವರ್ಷ ಹೆಚ್ಚು ಹೆಚ್ಚಾಗಿ ಪ್ರಯತ್ನಿಸುತ್ತಾ ನಮ್ಮ ಜೀವಿತವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅಭಿಲಾಷೆ ಪ್ರಕಾರ ಪರಿವರ್ತಿಸಲು ಅಲ್ಲಾಹನು ನಮಗೆ ಭಾಗ್ಯ ನೀಡಲಿ.

ನಮಾಝ್ ನಂತರ ಹುಝೂರ್ ಇಬ್ಬರು ಮೃತರಿಗೋಸ್ಕರ ನಮಾಝೆ ಜನಾಝ ಗಾಯಿಬ್ ಅನುಷ್ಠಿಸಿದರು. ಒಂದನೆಯದು ಲುಕ್ಮಾನ್ ಶಹ್‌ಝಾದ್ ಸಾಹೇಬರದ್ದು. ಅವರನ್ನು ಪಾಕಿಸ್ತಾನದ ಗುಜ್‌ರಾನ್ ವಾಲಾ ಜಿಲ್ಲೆಯಲ್ಲಿ ಡಿಸೆಂಬರ್ 7ರಂದು ಫಜರ್ ನಮಾಝ್ ನಂತರ ಗುಂಡು ಹೊಡೆದು ದುಷ್ಕರ್ಮಿಗಳು ಶಹೀದರನ್ನಾಗಿ ಮಾಡಿದರು. إِنَّا لِلّٰهِ وَإِنَّا إِلَيْهِ رَاجِعُونَ ಅವರು ತನ್ನ ಕುಟುಂಬದ ಏಕೈಕ ಅಹ್ಮದಿಯಾಗಿದ್ದರು. ಅಲ್ಲಾಹನು ಅವರಿಗೆ ಉನ್ನತ ಸ್ಥಾನ ನೀಡಲಿ. ಅವರಿಗೆ ಜನ್ನತುಲ್ ಫಿರ್‌ದೌಸ್ ಲಭಿಸಲಿ. ಅವರ ಕುಟುಂಬ ಸದಸ್ಯರಿಗೆ ಸಹ ಅಹ್ಮದಿಯತ್ತಿನ ಪ್ರಕಾಶಗಳಿಸಲು ಭಾಗ್ಯ ಲಭಿಸುವಂತಾಗಲಿ.

ಇನ್ನೊಂದು ಜನಾಝ ಶಹ್‌ಝಾದೆ ಸತಾನೂಸ್ ಸಾಹಿಬ ಎಂಬ ಮೆಸಿಡೋನಿಯಾ ದೇಶದ ವನಿತೆಯದಾಗಿದೆ. ಅವರು ನವೆಂಬರ್ 19ರಂದು ಮೃತರಾದರು. إِنَّا لِلّٰهِ وَإِنَّا إِلَيْهِ رَاجِعُونَ ಅವರಿಗೆ 49 ವರ್ಷ ಪ್ರಾಯವಾಗಿತ್ತು. ಅವರಿಗೆ ಅಲ್ಲಾಹನು ಮಗ್‌ಫಿರತ್ ನೀಡಲಿ. ಅವರ ಪತಿ ಮತ್ತು ಮಕ್ಕಳಿಗೆ ಜಮಾಅತಿನೊಂದಿಗೆ ನಿಷ್ಠಾವಂತರಾಗಿ ಮುಂದುವರಿಯುವ ಭಾಗ್ಯ ಲಭಿಸಲಿ– ಆಮೀನ್.

---------------*****--------------

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 02-01-2015.*

Summarized by *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team** for **Nazarath Nashr-O-Isha'ath, Qadian**

***Email***: *khutuba.kannada@gmail.com*